ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 94-97
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

ಅಮರೇಶ ನುಗಡೋಣಿಯವರ 'ತಮಂಧದ ಕೇಡು' ಸಣ್ಣಕಥೆ: ಭಾಷಾ ವೈಶಿಷ್ಟ್ಯತೆ

ಸಂತೋಷಕುಮಾರ್ ಬಿ. ಪಿ
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

Abstract:
ಸಣ್ಣಕಥೆಯು ಆಧುನಿಕ ಸಾಹಿತ್ಯದ ಒಂದು ಮುಖ್ಯ ಪ್ರಕಾರವಾಗಿದ್ದು. ಆಧುನಿಕ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದ ಕಾವ್ಯ, ಕಾದಂಬರಿ, ನಾಟಕ ಪ್ರಬಂಧ ಇನ್ನೂ ಮೊದಲಾದ ಸಾಹಿತ್ಯವಾಹಿನಿಗಳಂತೆ ಸಣ್ಣಕಥೆಯೂ ಕೂಡ ಒಂದು ಪ್ರಕಾರವಾಗಿದೆ. ಆಧುನಿಕ ಸಣ್ಣಕಥೆಯು ಪಶ್ಚಿಮದ 'ಖುಂಡಿಣ ಖಣಂಡಿಥಿ'ಗೆ ಸಂವಾದಿಯಾಗಿದ್ದು ಆಧುನಿಕ ಬದುಕಿನ ಹತ್ತು ಹಲವಾರು ಸಂಕೀರ್ಣ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಕಲಾತ್ಮಕವಾಗಿ ಒಂದು ಸತ್ವಪೂರ್ಣ ಸಾಹಿತ್ಯವಾಹಿನಿಯಾಗಿ ಆಧುನಿಕ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಮಹತ್ವವನ್ನು ಪಡೆದುಕೊಂಡಿದೆ. ಕಥೆ ಹೇಳುವ ಪ್ರಕ್ರಿಯೆ ಇತ್ತೀಚಿನದಲ್ಲ. ಕಥೆ ಹೇಳುವ, ಕೇಳುವ ಪ್ರವೃತ್ತಿಯು ಅನಾದಿ ಕಾಲದಿಂದಲೂ ಬೆಳೆದುಕೊಂಡು ಬಂದಿದೆ. ಈ ಪ್ರವೃತ್ತಿಯು ಜನಪದರ ಕಾಲದಿಂದಲೂ ಬೆಳೆದುಕೊಂಡು ಕ್ರಮೇಣ ನಿರ್ದಿಷ್ಟ ಚೌಕಟ್ಟಿನ ನೆಲೆಗಟ್ಟನ್ನು ಕಂಡುಕೊಂಡು ಲಕ್ಷಣವನ್ನೊಳಗೊಂಡ ಸಾಹಿತ್ಯರೂಪವಾಗಿದೆ.

Keywords: *ಕನ್ನಡ ಸಾಹಿತ್ಯ, ಕಥನ ಸಾಹಿತ್ಯ, ಅಮರೇಶ ನುಗಡೋಣಿ, ಸಣ್ಣಕಥೆ, ತಮಂಧದ ಕೇಡು.*

ಪೀಠಿಕೆ

ಆಧುನಿಕ ಕನ್ನಡ ಸಾಹಿತ್ಯದ ಇನ್ನಿತರ ಪ್ರಕಾರಗಳಂತೆ ಆಧುನಿಕ ಬದುಕಿನ ಸಂಕೀರ್ಣ ಸಮಸ್ಯೆ ಮತ್ತು ಸವಾಲುಗಳನ್ನು ತನ್ನದೇ ಆದಂತಹ ಸ್ವರೂಪದ ಮಿತಿಯಲ್ಲಿ ಪಾತ್ರ, ಘಟನೆ, ಸಂಕ್ಷಿಪ್ತತೆ, ಏಕಾಗ್ರತೆ, ಸೃಜನಾತ್ಮಕ ದೃಷ್ಟಿಗಳಿಂದ ಒಂದು ಸತ್ವಯುತ ಮಾಧ್ಯಮವನ್ನಾಗಿ ಗುರುತಿಸಿ ಕೊಂಡಿತು. ಅಲ್ಲದೆ ಎಲ್ಲಕಿಂತ ಹೆಚ್ಚಾಗಿ ಹೊಸಗನ್ನಡ ಸಾಹಿತ್ಯ ಹುಟ್ಟಿದುದೇ ಭಾವಗೀತೆ ಹಾಗೂ ಸಣ್ಣಕಥೆಗಳಲ್ಲಿ ವಾಸ್ತವ ಜೀವನ ಚಿತ್ರಣ ಮತ್ತು ಸರಳ ಸುಂದರ ಗದ್ಯ ಶೈಲಿ ಸಣ್ಣಕಥೆಯಲ್ಲಿ ಸಾಧಿತವಾಯಿತು.

ನಿರ್ದಿಷ್ಟ ವ್ಯಾಪ್ತಿಯ ಗದ್ಯ ಎಂದು ಸಣ್ಣಕಥೆಯನ್ನು ಗಮನಿಸುವ ಸಂದರ್ಭದಲ್ಲಿ ಈ ಬಗೆಯ ರಚನೆಗಳು ಸಾವಿರಾರು ವರ್ಷಗಳಿಂತಲೂ ಮೊದಲೇ ಇತ್ತು ಎಂಬುದು ಗಮನಕ್ಕೆ ಬರುತ್ತದೆ. ಈ ಸಣ್ಣಕಥೆ ಎಂಬುದು ಸೃಷ್ಟಿಯಾಗಿ ಬಳಕೆಗೆ ಬರುವುದಕ್ಕೂ ಮೊದಲೇ ಅನೇಕ ಭಾಷೆಗಳಲ್ಲಿಯೂ ಸಣ್ಣಕಥೆಗಳಿದ್ದವು ಎಂಬುದನ್ನು ಗಮನಿಸಬಹುದು.

'ತಮಂಧದ ಕೇಡು' ಕಥೆಯ ಕಥೆಗಾರರಾದ ಡಾ.ಅಮರೇಶ ನುಗಡೋಣಿಯವರು ಕಥೆಗಾರರೆಂದೇ ಪ್ರಸಿದ್ಧರು. ರಾಯಚೂರು ಜಿಲ್ಲೆಯ ಸಿರವಾರ ತಾಲೂಕಿನ ನುಗಡೋಣಿಯವರಾದ ಇವರು ಅನೇಕ ಕಥೆ, ಕಾದಂಬರಿಗಳನ್ನು ಮತ್ತು ವಿಮರ್ಶೆ, ಸಂಶೋಧನಾ ಪುಸ್ತಕಗಳನ್ನು ಬರೆದಿದ್ದಾರೆ. ಇವರ ಎಲ್ಲ ಕಥೆಗಳಲ್ಲಿ ವಿಶಿಷ್ಟ ಭಾಷಾ ಬಳಕೆಯನ್ನು

Please cite this article as: ಸಂತೋಷಕುಮಾರ್. ಬಿ. ಪಿ. (2024). ಅಮರೇಶ ನುಗಡೋಣಿಯವರ 'ತಮಂಧದ ಕೇಡು' ಸಣ್ಣಕಥೆ: ಭಾಷಾ ವೈಶಿಷ್ಟ್ಯತೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(3), 94–97

ನೋಡಬಹುದು. ತಮ್ಮ ಅನೇಕ ಕಥೆ, ಕಾದಂಬರಿಗಳಲ್ಲಿ ಹೈದರಾಬಾದ್ ಕರ್ನಾಟಕದ ಭಾಷೆಯನ್ನು ಬಳಸಿದ್ದಾರೆ.

ತಮಂಧದ ಕೇಡು ಕಥೆಯಲ್ಲಿ ಅವರು ಹುಟ್ಟಿ ಬೆಳೆದ ನುಗಡೋಣಿ, ಸಿರವಾರ, ರಾಯಚೂರು ಸುತ್ತಮುತ್ತಲಿನ ಗ್ರಾಮ್ಯ ಭಾಷೆಯನ್ನು ಬಳಸಿದ್ದಾರೆ. ಕಥೆಗಾರರಿಗೆ ತಮ್ಮದೇ ಆದ ಭಾಷಾ ಬಳಕೆಯ ಹಿಡಿತವಿರುವ ಕಾರಣ ವಿಶಿಷ್ಟ ಕಥೆಗಾರ ಎಂದು ತಮ್ಮನ್ನು ಗುರುತಿಸಿಕೊಂಡಿರುತ್ತಾರೆ. ಈ ಕಥೆಯಲ್ಲಿನ ಪಾತ್ರಗಳು ಸಂದರ್ಭೋಚಿತವಾಗಿ ಮಾತನಾಡುವಂತಹ ಗ್ರಾಮೀಣ ಭಾಷಾನೆಲೆಗಳನ್ನು ನಾವು ಗುರುತಿಸಬಹುದು.

ಪ್ರಮಾಣಬದ್ಧ ಭಾಷೆ, ಪ್ರಾದೇಶಿಕ ಭಾಷೆ, ಪ್ರತಿಭಟನೆ ಭಾಷೆ, ಪ್ರತಿರೋಧದ ಭಾಷೆ, ಸಾಂಕೇತಿಕ ಭಾಷೆ, ಮೇಲು ವರ್ಗದ ಭಾಷೆ, ಕೆಳ ವರ್ಗದ ಭಾಷೆ, ಕಾವ್ಯತ್ಮಕ ಭಾಷೆ, ಇಂತಹ ಅನೇಕ ಭಾಷಾ ಬಳಕೆಯ ವೈಶಿಷ್ಟ್ಯಗಳನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಸಾಮಾಜಿಕ ಸಂರಚನೆಯಲ್ಲಿ ಅನೇಕ ಜನಸಾಮಾನ್ಯರ ಬದುಕು ಭಾವನೆಗಳ ನೆಲೆಗಳನ್ನು ಕಥೆಗಾರರು ಕಟ್ಟಿಕೊಟ್ಟಿರುವ ಬಗೆಯನ್ನು ನೋಡಬಹುದಾಗಿದೆ.

ಪ್ರಾದೇಶಿಕ ಭಾಷೆಯನ್ನು ಕಥೆಗಾರರು ವಿಶಿಷ್ಟವಾಗಿ ತಮಂಧದ ಕೇಡು ಕಥೆಯಲ್ಲಿ ಬಳಸಿದ್ದಾರೆ. ಉದಾಹರಣೆ ಎದರು ಮನೆ ಬಸಣ್ಣ ದುರುಗನನ್ನು ಮಾತಾಡಿಸುವ ಸಂದರ್ಭದಲ್ಲಿ 'ಬಾ ದುರ್ಗಾಣ್ಣ, ಬಾ ಬಾ! ದುಮದರಿ ಎದ್ದಾದ' ಅಂದು ಕರೆದ ಬಸಪ್ಪ.

ಹೌದು! ಹೆಂಗಾದ ನೋಡು, ಮುಂದಿದ್ರ ನಿನ್ನ ಮನೆ ಕಾಣವಲ್ದು!' ಅನಕಾಂತ ಬಂದು ಕುಂತ. ಹಾಯ್.... ಇದು ಬೇಸಾದ್ನೋಡು!

ಮಳೆಬಾರ್ದಿದ್ದಕ್ಕೆ ಅದರ ಬಗ್ಗೆ ಮಾತಾಡುತ್ತಿರುವಾಗ, ಈ ವರ್ಷ ಮಾರ್ಲಾಮಿ ಬಂದು ಹೋದರೂ ಮಳೆ ಬಂದಿಲ್ಲ. ಅದೇನೋ ತೂಪನ್ ಬಂದಾದಂಥ ಮಳೆ ಬರಾಕ ಅತ್ಯಾದ.

ಅನುಕರಣಾವ್ಯಯಗಳನ್ನು ಪ್ರಸ್ತುತ ಕಥೆಯಲ್ಲಿ ಅನೇಕ ಸಂದರ್ಭಗಳಲ್ಲಿ ಬಳಸಿದ್ದಾರೆ ಉದಾಹರಣೆ ದುರುಗನಿಗೆ ಎಚ್ಚರವಾಯಿತು! ಕಣ್ಣು ತೆರೆತಿದ್ದಂಗೆ ಎದೆ ಡವ ಡವ ಬಡ್ಕಂತಿತ್ತು! ಮೈಯೆಲ್ಲಾ ಬೆವತು ಹೋಯಿತು! ಹಂಗೆ ಮಕ್ಕಂಡು ಕನಸಿನ ಬೆನ್ನು ಹತ್ತಿದ....

ದುರುಗ ಮನೆಯ ಮುಂದೆ ಕುಳಿತಿರುವಾಗ ಕವಕವಕ ಶಬ್ದ ಮಾಡುವ ಸಾವಿರಾರು ಹಕ್ಕಿ ಪಕ್ಷಿಗಳ ದನಿ ದುರುಗನ ಕಿವಿ ತುಂಬಿತು. ತಮಂಧದ ಕೇಡು ಕಥೆಯಲ್ಲಿ ಕಥೆಗಾರರು ಡವಡವ, ಚಟಚಟ, ಕವಕವ ಮುಂತಾದ ಅನುಕಾರಣಾವ್ಯಗಳನ್ನು ಬಳಸಿದ್ದಾರೆ.

ಪ್ರಸ್ತುತ ಕಥೆಯಲ್ಲಿ ದ್ವಿರುಕ್ತಿಗಳನ್ನು ಕಥೆಗಾರರು ಬಳಸಿಕೊಂಡಿದ್ದಾರೆ. ಜನಸಾಮಾನ್ಯರ ಮಾತುಗಳಲ್ಲಿ ಬಳಸುವುದು ಸರ್ವೇ ಸಾಮಾನ್ಯ. ಉದಾಹರಣೆ ದುರುಗನ ಮನೆಯ ಬಳಿ ಇದ್ದ ಮರಗಳನ್ನು ಕಡಿದಾಗ ದುರುಗನು ಸಂಕಟಪಡುತ್ತಿದ್ದ ಅದನ್ನು ಕಂಡ ಶಾಂತಗೌಡ ದುರುಗನಿಗೆ ಪರಿಪರಿಯಾಗಿ ಸಮಾಧಾನ ಮಾಡಲು ನೋಡಿದ.

ಕನಸಿನಲ್ಲಿ ಭಯಗೊಂಡಿದ್ದ ದುರಗ ಇದು ಕಣ್ಣ ಮುಂದ ನಡೆದಂಗ ನೆನಪಾಗಿದ್ದೆ ತಡ ತಿರುಗಾ ದಿಗ್ಗನೆದ್ದು ಕುಂತು ಶಿವಾಶಿವಾ ಅಂದ.

ದುರುಗನಿಗೆ ಚಳಿಯಾಗಿ ಮೈಯೆಲ್ಲಾ ತೋದಂಗನಿಸಿತ್ತು ಮೈಸವರಿಕೊಂಡು....ನೀರು ನೀರು.. ಎಂದ.

ನೆನೆನೆನೆಸಿಕೊಂಡು ಯಪ್ಪಾ ಎಲ್ಲಾ ನಿನ್ನ ಆಟ ಬಲ್ಲವರ್ಯಾರು ಅಂತ ಅಂದುಕೊಂಡು ಕೈಮುಕ್ಕಂಡ. ಮುಂತಾದ ಸನ್ನಿವೇಶಗಳಲ್ಲಿ ಪರಿಪರಿ, ಶಿವಾಶಿವಾ, ನೆನೆನೆನೆ, ನೀರುನೀರು ಇತ್ಯಾದಿ ದ್ವಿರುಕ್ತಿಗಳನ್ನು ಪಡೆಯಬಹುದಾಗಿದೆ.

ಮೇಲ್ವರ್ಗದವರ ಭಾಷೆಯನ್ನು ಅಮರೇಶ ನುಗಡೋಣಿಯವರು ತಮಂಧದ ಕೇಡು ಕಥೆಯಲ್ಲಿ ಬಳಸಿರುವುದು ವೈಶಿಷ್ಟ್ಯತೆಯಿಂದ ಕೂಡಿದೆ.

ಉದಾಹರಣೆಗೆ ಶಾಂತಗೌಡ ಒಳಗ ಬರುವಾಗ ಎತ್ತಿನಂಕಣ ದಾಟುವಾಗ ಹೆಂಡೆ ತುಳುದುಬುಟ್ಟ!

ಥುಥ್.... ಲೇ ಎತ್ತಿನ ದಾರಿಯಾಗ ಮಲಗಸ್ಬೇಡಿ ಅಂತ ಹೇಳಿದ್ರು ಕೇಳ್ತಿರೆನೋ? ಎಂದು ಎತ್ತುಗಳಿಗೆ ಚಟಪಟ ಹೊಡೆದುಬಿಟ್ಟ, ಮತ್ತೆ ಎದ್ದು ಎತ್ತುಗಳಿಗೆ ಮೇವಾಕ್ರಲೇ.... ಎಂದನು ಶಾಂತಗೌಡ.

ಚೆನ್ನನ ಬಗ್ಗೆ ಮಾತನಾಡುತ್ತಾ ಭೂದೆಣ್ಣ ಹೀಗೆ ಹೇಳುತ್ತಾನೆ.

ಹೌದು.. ಜಾಸ್ತಿ ಓದ್ಕೋಂಡ್ರೆ ತಲೆ ಬರಾಬರಿ ಇರಂಗಿಲ್ಲ ಅಂತಾರಲ್ಲ ಅದು ಸುಳ್ಳಲ್ಲ. ಈ ನನ್ನ ಮಕ್ಕಳನ್ನ ಎಲ್ಲಿಟ್ಟಿರ್ಬೇಕೋ ಅಲ್ಲೇ ಇಟ್ಟಿರಬೇಕು..!

ಶಾಂತಗೌಡ ಚೆನ್ನನ ಬಗ್ಗೆ ದುರುಗನ ಹತ್ತಿರ ಮಾತನಾಡುತ್ತಾ, ನೀನಿದ್ದಂಗ ನಿನ್ನ ಮಗ ಇಲ್ಲ. ದುರುಗಾ... ಅವನು ಉಂಡು ಗಂಗಳದಾಗ ಹುಚ್ಚೆ ವೈಯಾಕ ನಿಂತಾನ! ನೀನು ಅವನಿಗೆ ಹೇಳು. ನಿನ್ನ ಮಾರೆ ನೋಡಿ ಸುಮ್ಮಿನೀ! ಇಲ್ಲಾಂದ್ರೆ ಅಂತ ಹುರಿದು ಮಾತನಾಡಿದ ಶಾಂತಗೌಡ.

ಅದೇ ರೀತಿಯಾಗಿ ಕೆಳವರ್ಗದವರ ಭಾಷಾ ವೈಶಿಷ್ಟ್ಯವನ್ನು ನೋಡಬಹುದು.

ಭಾಷೆ ಮನೆಯ ವಿಚಾರ ಬಂದಾಗ ದುರುಗ ಶಾಂತಗೌಡನಿಗೆ ಹೀಗೆ ಹೇಳುತ್ತಾನೆ 'ಯಪ್ಪಾ ನನಗೆ ಒಂದು ಮನೆ ಅಂತ ಇರಲಿ ಜೆಡ್ಡು ಜಾಪತ್ತು ಬಂದ್ರಾ...

ದುರಗ ಮಾತನಾಡುತ್ತ ಚೆನ್ನಮಲ್ಲನ ವಿಚಾರದಲ್ಲಿ ಕೋಪಗೊಂಡಿದ್ದ ಶಾಂತಗೌಡನ ಬಳಿ,

ಯಪ್ಪಾ, ಆ ನಂಬಿಕೆಯನ್ನು ಕಳಕಳ್ಳದಾಗ ಬದುಕಿರಬೇಕಂತಾನ ಈ ನಿಮ್ಮ ಮಾದ್ಗ!

ಬಸವ, ತಂದೆ ಯಾರನ್ನು ಇಡ್ಕೊಬೇಕು ಯಾರ್ನ ಬಿಡಬೇಕು ಒಂದು ಕಳ್ಳು...! ಒಂದು ಅನ್ನ ಅನಕಂಡ.

ಪ್ರತಿಭಟನೆಯ ಭಾಷೆಯನ್ನು ಸಹ ಈ ಕಥೆಯಲ್ಲಿ ಗುರುತಿಸಬಹುದು.

ಚೆನ್ನ ಜೀತಪದ್ಧತಿಯ ವಿರುದ್ಧ ಈ ರೀತಿ ಹೇಳುತ್ತಾನೆ.

ನಮ್ಮಪ್ಪ ದುಡಿದಾನ ನಮ್ಮವ್ವ ದುಡಿದಾಳ ಮಾರಿಕೊಂಡರ ಅವರಿಬ್ಬರು ಶಾಂತಗೌಡಗ.

ಕನಸಿನಲ್ಲಿ ಮಗ ಚೆನ್ನನು ರಕ್ತದಲ್ಲಿ ಬಿದ್ದಂತೆ ಭಾಸವಾಗಿ ಶಾಂತಗೌಡನನ್ನು ಕಂಡು ಕೆಂಡ ಮಂಡಲವಾಗಿ ಅಬ್ಬರಿಸಿ, ಗೌಡ.... ನಿನ್ನ ಗುಣ ತೋರಿಸಿಬಿಟ್ಟಿ... ಅಂತ ಗೌಡನ ಮೇಲೆ ಹಾರಿಬಿಟ್ಟ!

ಮಗನಿಗೆ ಅಕ್ಕಮ್ಮನ ಆಸೆ ಬಿಟ್ಟುಬಿಡು ಎಂದು ದುರುಗ ಹೇಳಿದಾಗ ಅದಕ್ಕೆ ಚೆನ್ನ ಏನಾಗ್ತದೋ ಆಗ್ಲಿ ನೋಡತೀನಿ ಆದದ್ದೇ ಆಗೋದು ಅಂದು ಮರು ಮಾತಾನಾಡುತ್ತಾನೆ.... ಚೆನ್ನ

ಪ್ರಸ್ತುತ ಕಥೆಯಲ್ಲಿ ನಿರೂಪಕರು ಅನೇಕ ಸಂಖ್ಯಾವಾಚಕ ಪದಗಳನ್ನು ಬಳಸಿರುವುದು ಕಾಣಬಹುದು. ಉದಾಹರಣೆಗೆ ಮನೆಯ ಮುಂದೆ ಕುಳಿತಿರುವಾಗ ಕವಕವಕ ಪಾಠ ಮಾಡುವ ಸಾವಿರಾರು ಹಕ್ಕಿ ಪಕ್ಷಿಗಳ ದನಿ ದುರುಗನ ಕಿವಿ ತುಂಬಿತು.

ಎರಡು ಮರಗಳನ್ನು ಕಡಿದು ನಾಕು ವರ್ಷಗಳಾಗಿದ್ದವು...

ಮರಗಳನ್ನು ಕಡಿದ ನಂತರ ಸಾಬನು ಎರಡು ಎತ್ತಿನ ಬಂಡಿ ಅಂತೇಳಿ ಶಾಂತಗೌಡನಿಗೆ ಹೇಳುವಾಗ ಸಂಖ್ಯಾ ವಾಚಕಗಳನ್ನು ಬಳಸಲಾಗಿದೆ.

ತೂಪನ್, ಲಾರಿ, ಚಿಮಣಿ, ಖಬರು, ಮುಂತಾದ ಅನ್ಯದೇಶಿಯ ಪದಗಳನ್ನ ಬಳಸಿದ್ದಾರೆ.

ಅಮರೇಶ ನುಡಗೋಣಿಯವರು ಕಥೆಯ ಭಾಷೆಯ ಸೊಗಸನ್ನು ಹೆಚ್ಚಿಸುವುದಕ್ಕಾಗಿ ಅಲ್ಲಿನ ಗ್ರಾಮ್ಯ ಭಾಷೆಯನ್ನು ಕಣ್ಣಿಗೆ ಕಟ್ಟುವಂತೆ ಬಳಸಿದ್ದಾರೆ. ಇವರ ಕಥೆ, ಕಾದಂಬರಿಗಳ ಬರಹಗಳಲ್ಲಿ ಜನ ಸಾಮಾನ್ಯರ ಭಾಷೆಯನ್ನು ಅಚ್ಚುಕಟ್ಟಾದ ರೀತಿಯಲ್ಲಿ ಬಳಸಿದ್ದಾರೆ. ಆಡು ನುಡಿಯಿಂದ ಕೂಡಿರುವ ಸಂಭಾಷಣೆಗಳು ಓದುವವರ ಮನಸ್ಸನ್ನು ಸುಲಭವಾಗಿ ಮುಟ್ಟಲು ಅಮರೇಶ ನುಗಡೋಣಿಯವರು ಹೈದರಾಬಾದ್ ಕರ್ನಾಟಕದ ಭಾಷೆಯನ್ನು ಸಮರ್ಪಕವಾಗಿ ಬಳಸುವುದರಲ್ಲಿ ಯಶಸ್ವಿಯಾಗುತ್ತಾರೆ. ತಮಂಧದ ಕೇಡು ಕಥೆಯಲ್ಲಿನ ಸಾಮಾಜಿಕ ವ್ಯವಸ್ಥೆಯನ್ನು ಅವರ ಸಂಕಟ, ನೋವು, ಪ್ರತಿಭಟನೆ, ಅಳಲುಗಳನ್ನು, ಪ್ರತಿರೋಧವನ್ನು

ಮೇಲ್ವರ್ಗದವರ ದರ್ಪವನ್ನು ಹಾಗೆಯೇ ಶಿಕ್ಷಣದಿಂದ ಬದಲಾಗುವ ಆಧುನಿಕ ದೃಷ್ಟಿಕೋನವನ್ನು ಕಣ್ಣಿಗೆ ಕಟ್ಟುವಂತೆ ಕಥೆಯ ಭಾಷಾಬಳಕೆಯನ್ನು ಕಥೆಗಾರರು ಮಾಡಿದ್ದಾರೆ.

ಆಕರ ಗ್ರಂಥ

- ಅಮರೇಶ ನುಗಡೋಣಿ. (2016). *ತಮಂಧದ ಕೇಡು.* ಪಲ್ಲವ ಪ್ರಕಾಶನ.

ಪರಾಮರ್ಶನ ಗ್ರಂಥಗಳು.

- ರಾಮಚಂದ್ರ ಶರ್ಮ. (ಸಂ.) (1999). *ಸಮಕಾಲೀನ ಕನ್ನಡ ಸಣ್ಣ ಕಥೆಗಳು.* ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ.
- ಅಂಗಡಿ. ಎಸ್.ಎಸ್. (2010). *ಶಂಬಾ ಜೋಶಿ ಭಾಷಿಕ ವಿವೇಚನೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.